ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಕ್ಕಮಗಳೂರು

ದಿನಾಂಕಃ 04.03.2026

**<u>ಸಿ.ಸಿ.ನಂ.2283/2025</u>**

ಫಿರ್ಯಾದುದಾರರು: ಶ್ರೀಮತಿ ಅಶ್ವಿನಿ,
ಕೋಂ ಲೇಟ್ ಸಿ. ಬಾಲಕೃಷ್ಣ,
ಸುಮಾರು 38 ವರ್ಷ
ವಾಸಃ ವಿದ್ಯಾಭಾರತಿ ಶಾಲೆ ರಸ್ತೆ,
ಗೌರಿ ಕಾಲುವೆ,
ಚಿಕ್ಕಮಗಳೂರು.

ವಿರುದ್ಧ

ಆರೋಪಿ : ಕರಿಬಸಪ್ಪ,
ಬಿನ್ ವೆಂಕಟಪ್ಪ,
ವಾಸಃ ಶಂಕರಪುರ ಪೊಲೀಸ್ ಠಾಣೆ,
ಶಂಕರಮಠ ರಸ್ತೆ,
ಚಿಕ್ಕಣ್ಣ ಗಾರ್ಡನ್, ಶಂಕರಪುರಂ,
ಬೆಂಗಳೂರು
ಹಾಗೂ
ನಂ.203, 2 ನೇ ಫ್ಲೋರ್,
ಲಾಸ್ಯ ಅಪಾರ್ಟ್ ಮೆಂಟ್,
ಬೇಗೂರು ರಸ್ತೆ, ಸಿ.ಎಂ.ಸಿ ರಸ್ತೆ,
ಬೊಮ್ಮನಹಳ್ಳಿ

<u>: ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ಆರೋಪಿ ಹೇಳಿಕೆಃ</u>

1. ಅಭಿಯೋಜನೆಯವರ ಪರ ಸಾಕ್ಷಿ ವಿಚಾರಣೆಯನ್ನು ಕೇಳಿರುವಿಯಾ?

ಉತ್ತರ :

2. ಪ್ರಾಸಾ-1 ಶ್ರೀಮತಿ ಅಶ್ವಿನಿ ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ ಆರೋಪಿಯಾದ ನೀವು ತಮ್ಮಿಂದ ರೂ.25,00,000/- ಗಳನ್ನು ಸಾಲವಾಗಿ ಪಡೆದುಕೊಂಡು ಸದರಿ ಮೊತ್ತದ ಪಾವತಿಗಾಗಿ ದಿನಾಂಕ 05.08.2025 ರ ಹೆಚ್.ಡಿ.ಎಫ್.ಸಿ. ಬ್ಯಾಂಕ್, ಬಿ.ಟಿ.ಎಂ ಲೇಔಟ್, ಬೆಂಗಳೂರು ಶಾಖೆಯ ಚೆಕ್ ನಂ.000020 ನ್ನು ರೂಃ 25,00,000/- ಗಳಿಗೆ ನೀಡಿದ್ದೀರಿ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

3. ಫ್ರಾಸಾ-1 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಹೇಳಿರುವುದೇನೆಂದರೆ ತಾನು ಆ ಚೆಕ್ಕನ್ನು ಎಸ್.ಬಿ.ಐ ಬ್ಯಾಂಕ್, ಎಂ.ಜಿ. ರಸ್ತೆ ಶಾಖೆ, ಚಿಕ್ಕಮಗಳೂರು ಶಾಖೆಗೆ ನಗದೀಕರಣಕ್ಕೆಂದು ಸಲ್ಲಿಸಿದಾಗ, ಸದರಿ ಚೆಕ್ " Account Blocked " ಎಂಬ ಹಿಂಬರಹದೊಂದಿಗೆ ನಗದಾಗದೇ ವಾಪಾಸ್ಸು ಬಂದಿರುವುದೆಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

4. ಫ್ರಾಸಾ-1 ಮುಂದುವರೆದು ತಮ್ಮ ನುಡಿ ಸಾಕ್ಷ್ಯದಲ್ಲಿ ಸದರಿ ಚೆಕ್ ನಗದು ಆಗದೇ ಇದ್ದಾಗ, ದಿನಾಂಕಃ 06.09.2025 ರಂದು ನೋಟಿಸ್ ನೀಡಿದ್ದು, ನೀವು ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರಃ

6. ನೀವು ಈ ಮೊಕದ್ದಮೆಯಲ್ಲಿ ಏನನ್ನಾದರು ಹೇಳುವುದಿದೆಯೇ?

ಉತ್ತರಃ

7. ನೀವು ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಾ ಅಥವಾ ಯಾವುದಾದರೂ ದಾಖಲೆ ಹಾಜರುಪಡಿಸುತ್ತೀರಾ?

ಉತ್ತರಃ

ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಕೇಳಿ ಅವರು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ.

Sd/-
[ಕುಮಾರಿ ಸುಜಾತ]
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಮು.ನ್ಯಾದಂ., ಚಿಕ್ಕಮಗಳೂರು.